ಆ) 2013–14ರಲ್ಲಿ ಕೇಂದ್ರ ಹಾಗೂ ರಾಜ್ಯವಲಯಗಳಡಿ ಹಂಚಿಕೆಯಾದ ಮತ್ತು ಬಿಡುಗಡೆಯಾದ ಅನುದಾನದ ವಿವರ ಕೆಳಕಂಡಂತಿದೆ

(₹ ಕೋಟಿಗಳಲ್ಲಿ)

ವರ್ಷ	ಕೇಂದ್ರ	ರಾಜ್ಯ	ಒಟ್ಟು
2013–14	1087.26	907.95	1995.21

ಇ) 2013–14ರಲ್ಲಿ 39,526 ಕಾಮಗಾರಿಗಳನ್ನು ಪೂರ್ಣಗೊಳಿಸಿದೆ. 2014–15ನೇ ಸಾಲಿನಲ್ಲಿ 105 ಬಹುಗ್ರಾಮ ಯೋಜನೆಗಳನ್ನು ಮತ್ತು ಇತರೆ 38,827 ಕಾಮಗಾರಿಗಳನ್ನು ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.

ಸರ್ವ ಶಿಕ್ಷಣ ಅಭಿಯಾನ ಯೋಜನೆ

2543(3213); ಶ್ರೀ ಬಸವರಾಜ ಎಸ್. ಬೊಮ್ಮಾಯಿ (ಶಿಗ್ಗಾಂವ್)

ಅ) 2013–14ನೇ ಸಾಲಿನಲ್ಲಿ ಸರ್ವ ಶಿಕ್ಷಣ ಅಭಿಯಾನ ಯೋಜನೆ ಅಡಿಯಲ್ಲಿ ಬಿಡುಗಡೆಯಾಗಿರುವ ಮತ್ತು ಖರ್ಚಾಗಿರುವ ಮೊತ್ತ ಎಷ್ಟು;

ಆ) ರಾಜ್ಯದಲ್ಲಿ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ (ಆರ್.ಎಂ.ಎಸ್.ಎ.) ಯೋಜನೆ ಪ್ರಗತಿ ಕುಂಠಿತವಾಗಿದೆಯೇ; ಹಾಗಿದ್ದಲ್ಲಿ, ಯೋಜನೆಯ ಪ್ರಗತಿ ಸಾಧಿಸುವ ಕ್ರಮಗಳೇನು;

ಇ) ರಾಜ್ಯದಲ್ಲಿ ಹೆಂಚಿನ ಮೇಲ್ಛಾವಣಿಯಿರುವ ಶಾಲಾ ಕೊಠಡಿಗಳು ಎಷ್ಟು; ಅವುಗಳನ್ನು ಆರ್.ಸಿ.ಸಿ. ಯಾಗಿ ಮಾರ್ಪಾಡು ಮಾಡಲಾಗುವುದೇ; ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಕಿಮ್ಮನೆ ರತ್ನಾಕರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಈ ಯೋಜನೆಯಡಿಯಲ್ಲಿ ಬಿಡುಗಡೆಯಾಗಿರುವ ಮತ್ತು ಖರ್ಚಾಗಿರುವ ಮೊತ್ತದ ವಿವರ ಈ ಕೆಳಕಂಡಂತಿದೆ.

₹ ಲಕ್ಷಗಳಲ್ಲಿ

ವರ್ಷ	AWP & B	ಭಾರತ ಸರ್ಕಾರದಿಂದ ಮಂಜೂರಾದ ಮೊತ್ತ	ಕರ್ನಾಟಕ ಸರ್ಕಾರದಿಂದ ಮಂಜೂರಾದ ಮೊತ್ತ	13ನೇ ಹಣಕಾಸಿನಲ್ಲಿ ಮಂಜೂರಾದ ಮೊತ್ತ	ಒಟ್ಟು ಅನುದಾನ	ಖರ್ಚು
2013-14	118216.068	65371.330	36055.624	15200.000	116626.954	91639.046

ಆ) ರಾಜ್ಯದಲ್ಲಿ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ (ಆರ್.ಎಂ.ಎಸ್.ಎ) ಯೋಜನೆಯ ಪ್ರಗತಿ ಕುಂಠಿತವಾಗಿರುವುದಿಲ್ಲ. ಈ ಯೋಜನೆವತಿಯಿಂದ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನ ವಿವರ ಈ ಕೆಳಕಂಡಂತಿದೆ.

ವರ್ಷ	ಒಟ್ಟು ಅನುಮೋದಿತ ಅನುದಾನ	ಕೇಂದ್ರ ಸರ್ಕಾರದ ಪಾಲು (75%)	ರಾಜ್ಯ ಸರ್ಕಾರದ ಪಾಲು (25%)
2012–13	11273.69	8455.27	5532.52
2013–14	13897.47	10423.10	3474.37

ಈ ಯೋಜನೆಯಡಿಯಲ್ಲಿ ಈ ಕೆಳಕಂಡ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಿ ಪ್ರಗತಿ ಸಾಧಿಸಲಾಗುತ್ತಿದೆ.

- ಉನ್ನತೀಕರಿಸಿದ ಶಾಲೆಗಳು.
- ಮೂಲ ಸೌಲಭ್ಯ ಕಲ್ಪಿಸಿ ಪ್ರಸ್ತುತ ಇರುವ ಪ್ರೌಢಶಾಲೆಗಳ ಬಲವರ್ಧನೆ.
- ಶಾಲಾ ಅನುದಾನ.
- ಶಿಕ್ಷಕರ ತರಬೇತಿ.

- ಕಲಿಕಾ ಅಭಿವೃದ್ಧಿಗೆ ವಿಶೇಷ ತರಬೇತಿ.
- ಹೆಣ್ಣು ಮಕ್ಕಳಿಗೆ ಸ್ವಯಂ ರಕ್ಷಣೆಗೆ ತರಬೇತಿ.

ಆದರೆ, ಆರ್.ಎಂ.ಎಸ್.ಎ. ಒಂದು ಭಾಗ ಸಿವಿಲ್ ಕಾಮಗಾರಿಗಳ ನಿರ್ಮಾಣ ಅಲ್ಪಮಟ್ಟಿಗೆ ನಿಧಾನವಾಗಿದ್ದು, ಶೀಘ್ರ ಪೂರ್ಣಗೊಳಿಸಲು ತಿಳಿಸಲಾಗಿದೆ.

ಇ) ಒಟ್ಟು 59955 ಕೊಠಡಿಗಳು ಹೆಂಚಿನ ಮೇಲ್ಛಾವಣಿ ಹೊಂದಿವೆ. ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರುಗಳಿಗೆ ಅಸುರಕ್ಷಿತವೆನ್ನಿಸಿದ್ದಲ್ಲಿ ಮಾತ್ರ ಕ್ರಮವಾಹಿಸಲು ಯೋಜನೆ ರೂಪಿಸಲಾಗುತ್ತಿದೆ ಹಾಗೂ ರಾಜ್ಯ ವಲಯದಡಿ ಅನುದಾನದ ಅನುದಾನ ಲಭ್ಯತೆ ಆಧರಿಸಿ ಆದ್ಯತೆ ಅನುಸಾರ ಕ್ರಮವಾಹಿಸಲಗುತ್ತಿದೆ.

ಜಾನಪದ ವಿಶ್ವವಿದ್ಯಾಲಯದ ಅಭಿವೃದ್ಧಿ

2544(3214); ಶ್ರೀ ಬಸವರಾಜ ಎಸ್. ಬೊಮ್ಮಾಯಿ (ಶಿಗ್ಗಾಂವಿ)

ಅ) ಜಾನಪದ ವಿಶ್ವವಿದ್ಯಾಲಯ ಸ್ಥಾಪನೆ ಆದ ಮೇಲೆ ವಿವಿಧ ಪುಸ್ತಳಿಗಳನ್ನು ಅನುಮೋದಿಸಿದೆಯೇ; ಅನುಮೋದಿಸಿದ್ದಲ್ಲಿ ಕಾರಣಗಳೇನು;

ಆ) ಕಳೆದ ಮೂರು ವರ್ಷಗಳ ಹಿಂದೆ ಜಾನಪದ ವಿಶ್ವವಿದ್ಯಾಲಯಕ್ಕೆ ಸರ್ಕಾರ ನಿಗದಿಪಡಿಸಿದ ಹಾಗೂ ಬಿಡುಗಡೆ ಮಾಡಿದ ಅನುದಾನ ಎಷ್ಟು;

ಇ) ಪ್ರಸ್ತುತ ವರ್ಷ ಜಾನಪದ ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ಸರ್ಕಾರದ ಯೋಜನೆಗಳೇನು; ಅದಕ್ಕಾಗಿ ಸರ್ಕಾರ ಯಾವ ಕಾರ್ಯಕ್ರಮಗಳನ್ನು ನಿಗದಿಪಡಿಸಿದೆ?

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು)

ಅ) ಇಲ್ಲ.